5) ಬಂಟವಾಳ ದೈವಸ್ಥಳ ಎಂಬಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರನ್ನು ನೇಮಿಸುವ ಬಗ್ಗೆ.

ಶ್ರೀ ರಮಾನಾಥರೈ.—ಅಧ್ಯಕ್ಷರೆ, ಬಂಟವಾಳ ಕ್ಷೇತ್ರದ ದೈವಸ್ಥಳ ಎಂಬಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಖಾಲಿ ಇದ್ದ ವೈದ್ಯರ ಸ್ಥಾನಕ್ಕೆ ಓರ್ವ ವೈದ್ಯರನ್ನು ನೇಮಿಸಿದ್ದರೂ ಸದ್ರಿ ವೈದ್ಯರು ಅಧಿಕಾರ ವಹಿಸಿಕೊಂಡ ದಿನ ಬಂದವರು ಆ ನಂತರ ಉನ್ನತ ವ್ಯಾಸಂಗದ ನೆಪದಿಂದ ಹೊರ ತೆರಳಿದ್ದಾರೆ. ಈಗ ಸದ್ರಿ ಆಸ್ಪತ್ರೆಯಲ್ಲಿ ದಾಖಲೆಗಳ ಪ್ರಕಾರ ವೈದ್ಯರಿದ್ದರೂ ವೈದ್ಯರಿಲ್ಲದಂತಾಗಿ ಜನತೆಗೆ ತುಂಬಾ ತೊಂದರೆಯುಂಟಾಗಿದೆ. ಆದ್ದರಿಂದ ಈ ಬಗ್ಗೆ ಮಾನ್ಯ ಸಚಿವರು ತೀವ್ರವಾಗಿ ಗಮನ ಹರಿಸಬೇಕಾಗಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಸಚಿವರು).—ಅಧ್ಯಕ್ಷರೆ, ಆ ಸ್ಥಾನಕ್ಕೆ ಆದಷ್ಟು ಬೇಗ ಬೇರೆ ಕಡೆಯಿಂದ ಹಾಕುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

6) ಸಂಕೇಶ್ವರ ಕ್ಷೇತ್ರದ ಶಿಪ್ಪೂರು–ಮಂಡಲಗ ರಸ್ತೆಯನ್ನು ರಿಪೇರಿ ಮಾಡುವ ಬಗ್ಗೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಅಧ್ಯಕ್ಷರೆ, ಸಂಕೇಶ್ವರ ಮತದಾರ ಕ್ಷೇತ್ರದ ಶಿಪ್ಪೂರು ಮಂಡಲಗ ರಸ್ತೆಯ ರಿಪೇರಿ ಬಗ್ಗೆ ಸರ್ಕಾರು ಮೂರು ವರ್ಷಗಳಿಂದ ಈ ಕೆಲಸವು ನಡೆದಿರುತ್ತದೆ. ಈ ರಸ್ತೆಯ ಮೇಲೆ ಪ್ರವಾಸಿ ವಾಹನಗಳ ಓಡಾಟವು ಹೆಚ್ಚಿಗೆ ಇದ್ದು ನಿಪ್ಪಾಣಿಯಿಂದ ಮಹಾರಾಷ್ಟ್ರದ ಗಡಹಿಂಗಲಜ ಪಟ್ಟಣಕ್ಕೆ ಇದು ಒಂದೇ ರಸ್ತೆ ಇದ್ದು ರಸ್ತೆಯ ಕೆಲಸ ತೀವ್ರತೆಯಿಂದ ಪೂರ್ಣಗೊಳ್ಳದೆ ಇರುವುದರಿಂದ ಕರ್ನಾಟಕ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಇದೊಂದು ಚರ್ಚೆಯ ವಿಷಯವಾಗಿರುತ್ತದೆ. ದಿನ ನಿತ್ಯ ಈ ರಸ್ತೆಯಿಂದ ಸುಮಾರು ೬೦ ಬಸ್ಸುಗಳ ಓಡಾಟವಿದ್ದು ಈ ರಸ್ತೆಯನ್ನು ಸಂಪೂರ್ಣ ಡಾಂಬರೀಕರಣಕ್ಕಾಗಿ ಹಣದ ಬಿಡುಗಡೆ ಮಾಡುವಂತೆ ಈ ಮೊದಲೇ ಕೇಳಿಕೊಂಡಿದ್ದು ಹಣ ಬಿಡುಗಡೆಯಾಗದೇ ಇರುವುದರಿಂದ ಕೆಲವು ಸ್ಥಳಗಳಲ್ಲಿ ತಗ್ಗುಗಳಾಗಿರುತ್ತದೆ. ಕಾರಣ ಹಣ ಬಿಡುಗಡೆ ಮಾಡಿ ತೀವ್ರವಾಗಿ ಕೆಲಸ ಪೂರ್ತಿಗೊಳಿಸುವಂತೆ ಸರಕಾರವನ್ನು ಈ ನೋಟಿಸಿನ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು) —ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳ ಗಮನಕ್ಕೆ ಇದನ್ನು ತರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಮಂತ್ರಿಗಳು ಕೊಡತಕ್ಕ ಉತ್ತರ ರೆಕಾರ್ಡ್‌ಗೆ ಹೋಗುತ್ತದೆ. ಮಾನ್ಯ ಮಂತ್ರಿಗಳ ಸಚಿವರು ಗಮನಕ್ಕೆ ತರುತ್ತೇನೆಂದು ಹೇಳುತ್ತಿದ್ದಾರೆ. ಅವರು ಮಂತ್ರಿಗಳ ಗಮನಕ್ಕೆ ತರತಕ್ಕ ಕೆಲಸಮಾಡುತ್ತಾರೆ ಅಷ್ಟೆ. ಅವರು ಕೊಡತಕ್ಕ ಈ ರೀತಿಯ ಉತ್ತರವನ್ನು ಯಾರೂ ಕೂಡ ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ರಾಚಯ್ಯ.—ನಿಯಮಗಳ ಪ್ರಕಾರ ಮಂತ್ರಿಗಳ ಗಮನಕ್ಕೆ ತರುತ್ತೇವೆ. ಅವರು ಈ ವಿಷಯವನ್ನು ಪರಿಶೀಲಿಸುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ, ಆ ಉತ್ತರವನ್ನು ಈ ಸದನದಕ್ಕೆ ಕೊಡಬೇಕು.

ಶ್ರೀ ಬಿ. ರಾಚಯ್ಯ.—ನಿಯಮ ೫೫ರ ಸ್ಕೋಪ್ ಎಷ್ಟು ಇದೆ? ಮಾನ್ಯ ಸದಸ್ಯರು ಎರಡು ಮೂರು ವಿಷಯಗಳನ್ನು ಕೊಟ್ಟಿದ್ದಾರೆ ಅದಕ್ಕೆ ಏನು ಉತ್ತರ ತರಿಸಿಕೊಡಬೇಕೋ ಅದನ್ನು ತರಿಸಿಕೊಡುತ್ತಾರೆ.

ಅಧ್ಯಕ್ಷರು.—ಉತ್ತರ ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆ, ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಈ ತರಹ ಹೇಳಿದರೆ ಸರಿ ಹೋಗುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೆ, ಹಿಂದೆ ನಿಯಮ ೫೫ರ ಪ್ರಕಾರ ಕೇಳಿದ್ದಕ್ಕೆ, ಇದೇ ತರಹ ವಿಚಾರ ಮಾಡುತ್ತೇನೆಂದು ಹೇಳಿದ್ದರೂ ಏನೂ ಮಾಡಿಲ್ಲ.